**MYSOORU MITHRA (KANNADA DAILY)**

Date: Wednesday, February 12, 2014 Page: 10

Edition: Mysore Language: Kannada

# ಆವಿಷ್ಕಾರದಿಂದಾಗಿ ದೇಶದ ಆರ್ಥಿಕ ಸುಧಾರಣೆ



ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಸಂಸ್ಥೆ (ಎಸ್‌ಡಿಎಂಐಎಂಡಿ) ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ವಾರ್ಷಿಕ ಭಾಷಣ ಮಾಲಿಕೆಯಲ್ಲಿ ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ (ಸಿಎಸ್‌ಐಆರ್)ನ ಮಾಜಿ ನಿರ್ದೇಶಕ ಹಾಗೂ ಗ್ಲೋಬಲ್ ರಿಸರ್ಚ್ ಅಲೈಯನ್ಸ್ ಅಧ್ಯಕ್ಷ ಡಾ.ಆರ್.ಎ.ಮಷೇಲ್ಕರ್ ಮಾತನಾಡಿದರು.

ಮೈಸೂರು, ಫೆ.೧೧(ಎಂಕೆ)– ದೇಶದ ಆರ್ಥಿಕತೆ ಸುಧಾರಿಸುವಲ್ಲಿ ಆವಿಷ್ಕಾರಗಳ ಪಾತ್ರ ಪ್ರಮುಖವಾಗಿರುತ್ತದೆ ಎಂದು ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ (ಸಿಎಸ್‌ಐಆರ್)ನ ಮಾಜಿ ನಿರ್ದೇಶಕ ಹಾಗೂ ಗ್ಲೋಬಲ್ ರಿಸರ್ಚ್ ಅಲೈಯನ್ಸ್ ಅಧ್ಯಕ್ಷ ಡಾ.ಆರ್.ಎ. ಮಷೇಲ್ಕರ್ ಅಭಿಪ್ರಾಯಪಟ್ಟರು.

ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಸಂಸ್ಥೆ (ಎಸ್‌ಡಿಎಂಐಎಂಡಿ) ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ವಾರ್ಷಿಕ ಭಾಷಣ ಮಾಲಿಕೆಯಲ್ಲಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಪೈಪೋಟಿಯಲ್ಲಿ ಹೊರಹುಮ್ಮುವ ಆವಿಷ್ಕಾರಗಳು ಸಾರ್ವಜನಿಕರ ಜೀವನ ಮಟ್ಟ ಸುಧಾರಿಸುವಂತಿರಬೇಕು ಎಂದು ತಿಳಿಸಿದರು.

ಯಾವುದೇ ದೇಶದ ಆರ್ಥಿಕತೆ ಸುಧಾರಣೆ ಕಾಣಬೇಕೆಂದರೆ ಉತ್ಕೃಷ್ಟ ಆವಿಷ್ಕಾರಗಳು ಅತ್ಯಗತ್ಯ. ಈ ನಿಟ್ಟಿನಲ್ಲಿ ಆವಿಷ್ಕಾರಕ್ಕೆ ತೊಡಗುವವರು ಮಹತ್ವಾಕಾಂಕ್ಷೆ ಹೊಂದಿರಬೇಕಾಗುತ್ತದೆ. ನಿರ್ದಿಷ್ಟ ಗುರಿ, ಸ್ಪಷ್ಟ ಪರಿಕಲ್ಪನೆಯ ಮೂಲಕ ಕಾರ್ಯ ನಿರ್ವಹಿಸ ಬೇಕಾಗುತ್ತದೆ. ಇದೆಲ್ಲಕ್ಕೂ ಪೂರಕವಾದ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

೨೧ನೇ ಶತಮಾನವನ್ನು ಆವಿಷ್ಕಾರಗಳ ಯುಗ ಎನ್ನಲಾಗುತ್ತದೆ. ಅದರಲ್ಲಿಯೂ ಭಾರತದಲ್ಲಿ ೧೯೯೧ರಲ್ಲಿ ತಂದ ಹೊಸ ಆರ್ಥಿಕ ನೀತಿಯಿಂದ ಅನೇಕ ಸುಧಾರಣೆಗಳಿಗೆ ಕಾರಣವಾಯಿತು. ಹೊಸ ಪರಿಕಲ್ಪನೆಯನ್ನು ಯಶಸ್ವಿಗೊಳಿಸುವುದೇ ನಿಜವಾದ ಆವಿಷ್ಕಾರವಾಗಿದೆ. ಸಾರ್ವಜನಿಕರಿಗೆ ಗುಣಮಟ್ಟದ ಸೇವೆಗಳನ್ನು ನೀಡುವಂತಹ ಆವಿಷ್ಕಾರಗಳು ಇಂದಿನ ಸಮಾಜಕ್ಕೆ ಬೇಕಾಗಿದೆ ಎಂದರು.

ಆರ್ಥಿಕತೆಯ ವೃಷ್ಟಿಯಿಂದ ಆವಿಷ್ಕಾರಗಳನ್ನು ಮಾಡುವಾಗ ಅನೇಕ ಸವಾಲುಗಳು ಎದುರಾಗುತ್ತವೆ. ಆರ್ಥಿಕ ಬೆಳವಣಿಗೆಯ ಜೊತೆಗೆ ದೇಶದಲ್ಲಿ ಹೆಚ್ಚಾಗುತ್ತಿರುವ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು, ಸರ್ವರ ಉಪಯೋಗಕ್ಕೆ ಯೋಗ್ಯವಾದ ಆವಿಷ್ಕಾರಗಳನ್ನು ಕೈಗೊಳ್ಳುವುದು ಸೂಕ್ತ ಎಂದು ಸಲಹೆ ಇತ್ತರು.

ಯೂರೋಪ್‌ನ ಕೆಲವು ಅಭಿವೃದ್ಧಿ ಹೊಂದಿದ ದೇಶಗಳು ನಾನಾ ಆವಿಷ್ಕಾರಗಳಲ್ಲಿ ಬಹಳ ಪ್ರಬಲವಾಗಿವೆ. ಆವಿಷ್ಕಾರದ ತತ್ವಗಳನ್ನೊಳಗೊಂಡ ಶಬ್ದಕೋಶ ಹೊಂದಿರುವ ಈ ದೇಶಗಳಲ್ಲಿನ ಅರ್ಥವ್ಯವಸ್ಥೆ ಸುಸ್ಥಿರವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕ ಎನ್.ಆರ್.ಪರಶುರಾಮ್, ಪಿಜಿಡಿಎಂ ಮುಖ್ಯಸ್ಥೆ ಡಾ.ನೀತುಗಣಪತಿ, ಸಿಎಫ್‌ಟಿಆರ್‌ಐ ಮಾಜಿ ನಿರ್ದೇಶಕ ಡಾ.ವಿ.ಪ್ರಕಾಶ್, ಮತ್ತಿತರರು ಉಪಸ್ಥಿತರಿದ್ದರು.